# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 868 |
| ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್.ಎಸ್ |
| ಉತ್ತರಿಸುವ ದಿನಾಂಕ | 24-07-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ಹಿಂದೂ ಧಾರ್ಮಿಕ ದತ್ತಿ ಇಲಾಖೆಯಡಿಯಲ್ಲಿ ಹೊರ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ವಸತಿ ಗೃಹಗಳ ಸಂಖ್ಯೆ ಎಷ್ಟು; ಕಟ್ಟಡ ಕಾಮಗಾರಿ ನಡೆಯುತ್ತಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು; (ರಾಜ್ಯವಾರು, ಜಿಲ್ಲಾವಾರು ಅಂಕಿ-ಅಂಶಗಳೊಂದಿಗೆ ಮಾಹಿತಿ ನೀಡುವುದು)</td>
<td>
ಹಿಂದೂ ಧಾರ್ಮಿಕ ದತ್ತಿ ಇಲಾಖೆಯಡಿಯಲ್ಲಿ ಹೊರ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಛತ್ರ / ವಸತಿ ಗೃಹಗಳ ಸಂಖ್ಯೆ: 06 ಹಾಗೂ ಕಟ್ಟಡ ಕಾಮಗಾರಿ ನಡೆಯುತ್ತಿರುವ ಛತ್ರ/ವಸತಿ ಗೃಹಗಳ ಸಂಖ್ಯೆ: 01.
ಸದರಿ ಛತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಕಟ್ಟಡ ಕಾಮಗಾರಿ ನಡೆಯುತ್ತಿರುವ ವಸತಿ ಗೃಹಗಳ ವಿವರ ಈ ಕೆಳಕಂಡಂತಿದೆ.
1. <u>ಆಂಧ್ರಪ್ರದೇಶ ತಿರುಮಲ ಕರ್ನಾಟಕ ರಾಜ್ಯ ಛತ್ರ:</u> ಈ ಛತ್ರದಲ್ಲಿ ಒಟ್ಟು 5 ವಸತಿ ಗೃಹ ಕಟ್ಟಡಗಳಿದ್ದು, ಕಾರ್ಯ ನಿರ್ವಹಿಸುತ್ತಿರುವ ಮತ್ತು ಕಟ್ಟಡ ಕಾಮಗಾರಿ ನಡೆಯುತ್ತಿರುವ ವಸತಿ ಗೃಹಗಳ ವಿವರ.
<table>
<tr><th>ಕ್ರ ಸಂ</th><th>ಕಾರ್ಯ ನಿರ್ವಹಿಸುತ್ತಿರುವ ವಸತಿ ಗೃಹಗಳು</th><th>ಕೊಠಡಿಗಳ ಸಂಖ್ಯೆ</th><th>ಕ್ರ ಸಂ</th><th>ಕಟ್ಟಡ ಕಾಮಗಾರಿ ನಡೆಯುತ್ತಿರುವ ವಸತಿ ಗೃಹಗಳು</th><th>ಕೊಠಡಿಗಳ ಸಂಖ್ಯೆ</th></tr>
<tr><td>1.</td><td>ಹಳೇಬೀಡು ಬ್ಲಾಕ್ (ಕೆ.ಪಿ.ಎಸ್ )</td><td>82</td><td>1.</td><td>ಐಹೊಳೆ ಬ್ಲಾಕ್</td><td>132</td></tr>
<tr><td rowspan="2">2.</td><td rowspan="2">ಹಂಪಿ ಬ್ಲಾಕ್</td><td rowspan="2">110</td><td>2.</td><td>ಶ್ರೀ ಕೃಷ್ಣ ದೇವರಾಯ ಬ್ಲಾಕ್</td><td>3 ಸೂಟ್</td></tr>
<tr><td>3.</td><td>ಶ್ರೀ ಕೃಷ್ಣ ರಾಜೇಂದ್ರ ಒಡೆಯರ್ ಕಲ್ಯಾಣ ಮಂಟಪ</td><td>500 ಮಂದಿ ಸಾಮರ್ಥ್ಯ ಮತ್ತು 13 ಕೊಠಡಿಗಳು</td></tr>
</table>
ಮೇಲ್ಕಂಡ ವಸತಿ ಗೃಹಗಳ ಪೈಕಿ ಹಳೇಬೀಡು ಮತ್ತು ಹಂಪಿ ಬ್ಲಾಕ್ ವಸತಿ ಗೃಹಗಳ ಕಟ್ಟಡದ ಕಾಮಗಾರಿಗಳು ಪೂರ್ಣಗೊಂಡಿದ್ದು, ಯಾತ್ರಾರ್ಥಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಉಳಿದಂತೆ ಐಹೊಳೆ, ಶ್ರೀ ಕೃಷ್ಣದೇವರಾಯ ಮತ್ತು ಶ್ರೀ ಕೃಷ್ಣ ರಾಜೇಂದ್ರ ಒಡೆಯರ್ ಕಲ್ಯಾಣ ಮಂಟಪ ಈ ವಸತಿ ಗೃಹಗಳ ಕಾಮಗಾರಿಯು ನಡೆಯುತ್ತಿದ್ದು, ಮುಕ್ತಾಯದ ಹಂತದಲ್ಲಿರುತ್ತದೆ.
2. <u>ಆಂಧ್ರ ಪ್ರದೇಶ ತಿರುಚಾನೂರು ಕರ್ನಾಟಕ ರಾಜ್ಯ ಛತ್ರ</u>: ಈ ಛತ್ರದ ಕಟ್ಟಡದಲ್ಲಿ ಎರಡು ಕಲ್ಯಾಣ ಮಂಟಪ ಮತ್ತು 19 ಕೊಠಡಿಗಳು ಇದ್ದು, ಯಾತ್ರಾರ್ಥಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ ಹಾಗೂ ಯಾವುದೇ ಕಟ್ಟಡ ಕಾಮಗಾರಿ ನಡೆಯುತ್ತಿರುವುದಿಲ್ಲ.
3. <u>ಆಂಧ್ರ ಪ್ರದೇಶ ಶ್ರೀಶೈಲಂ ಕರ್ನಾಟಕ ರಾಜ್ಯ ಛತ್ರ</u>: ಈ ಛತ್ರದ ಮೊದಲನೇ ಕಟ್ಟಡದಲ್ಲಿ 16 ಕೊಠಡಿಗಳು ಹಾಗೂ ಎರಡನೇ ಕಟ್ಟಡದಲ್ಲಿ 8 ಕೊಠಡಿಗಳಿದ್ದು, ಯಾತ್ರಾರ್ಥಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ ಹಾಗೂ ಯಾವುದೇ ಕಟ್ಟಡ ಕಾಮಗಾರಿ ನಡೆಯುತ್ತಿರುವುದಿಲ್ಲ.
</td>
</tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 4. <u>ಆಂದ್ರ ಪ್ರದೇಶ ಮಂತ್ರಾಲಯ ಕರ್ನಾಟಕ ರಾಜ್ಯ ಛತ್ರ:</u> ಈ ಛತ್ರದಲ್ಲಿ ಒಂದು ಕಲ್ಯಾಣ ಮಂಟಪ, ಹಳೆಯ ಕಟ್ಟಡದಲ್ಲಿ 52 ಕೊಠಡಿಗಳು ಹಾಗೂ ಹೊಸ ಕಟ್ಟಡದಲ್ಲಿ 50 ಕೊಠಡಿಗಳು ಇದ್ದು, ಯಾತ್ರಾರ್ಥಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ ಹಾಗೂ ಯಾವುದೇ ಕಟ್ಟಡ ಕಾಮಗಾರಿ ನಡೆಯುತ್ತಿರುವುದಿಲ್ಲ.<br>5. <u>ಉತ್ತರ ಪ್ರದೇಶ, ವಾರಣಾಸಿ ಕರ್ನಾಟಕ ರಾಜ್ಯ ಛತ್ರ :</u> ಈ ಛತ್ರದಲ್ಲಿ ಎರಡು ವಸತಿ ಕಟ್ಟಡಗಳಿದ್ದು, ಇವುಗಳಲ್ಲಿ 18 ಕೊಠಡಿಗಳು ಇದ್ದು, ಯಾತ್ರಾರ್ಥಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ ಹಾಗೂ ಯಾವುದೇ ಕಟ್ಟಡ ಕಾಮಗಾರಿ ನಡೆಯುತ್ತಿರುವುದಿಲ್ಲ.<br>6. <u>ಮಹಾರಾಷ್ಟ್ರದ ತುಳಜಾಪುರ, ಕರ್ನಟಕ ರಾಜ್ಯ ಛತ್ರ :</u> ಈ ಛತ್ರದಲ್ಲಿ 02 ಕೊಠಡಿ ಹಾಗೂ 04 ಡಾರ್ಮೆಟರಿಗಳಿದ್ದು, ಯಾತ್ರಾರ್ಥಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ ಹಾಗೂ ಯಾವುದೇ ಕಟ್ಟಡ ಕಾಮಗಾರಿ ನಡೆಯುತ್ತಿರುವುದಿಲ್ಲ.<br>7. <u>ಮಹಾರಾಷ್ಟ್ರದ ಗುಡ್ಡಾಪುರ ಕರ್ನಟಕ ಭವನ ನಿರ್ಮಾಣ:-</u> ಮಹಾರಾಷ್ಟ್ರ ರಾಜ್ಯದ ಸಾಂಗ್ಲಿ ಜಿಲ್ಲೆ ಗುಡ್ಡಾಪುರ ಶ್ರೀ ದಾನಮ್ಮ ದೇವಿ ದೇವಾಲಯಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಕರ್ನಾಟಕ ಭವನವನ್ನು ನಿರ್ಮಿಸಲಾಗುತ್ತಿದ್ದು, ಕಾಮಗಾರಿಯು ನಡೆಯುತ್ತಿದ್ದು, ಮುಕ್ತಾಯದ ಹಂತದಲ್ಲಿರುತ್ತದೆ. |
| ಆ) | ಸರ್ಕಾರದಿಂದ ಕಳೆದ ಮೂರು ವರ್ಷಗಳಿಂದ ಹೊರ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಗೃಹಗಳಿಗೆ ಎಷ್ಟು ಅನುದಾನ ನೀಡಲಾಗಿದೆ: (ವರ್ಷವಾರು ಅಂಕಿ-ಅಂಶಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದಿಂದ ಕಳೆದ ಮೂರು ವರ್ಷಗಳಿಂದ ಹೊರ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಗೃಹಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಒಟ್ಟು ರೂ.15409.00 ಲಕ್ಷಗಳು ಮಂಜೂರಾಗಿದ್ದು, ಅನುದಾನದ ವಿವರ ಕೆಳಕಂಡಂತಿದೆ. |

| ಹೊರ ರಾಜ್ಯ ಛತ್ರ | ವಿವರ | 2021-22 | 2022-23 | 2023-24 |
|---|---|---|---|---|
| | | (ರೂ.ಲಕ್ಷಗಳಲ್ಲಿ) | | |
| ಆಂದ್ರ ಪ್ರದೇಶ ತಿರುಮಲ ಕರ್ನಾಟಕ ರಾಜ್ಯ ಛತ್ರ | ನಿರ್ಮಾಣ | 10200.00 | - | - |
| | ನಿರ್ವಹಣೆ | 250.00 | 100.00 | 200.00 |
| ಆಂದ್ರ ಪ್ರದೇಶ ಶ್ರೀ ಶೈಲಂ ಕರ್ನಾಟಕ ರಾಜ್ಯ ಛತ್ರ | ನಿರ್ಮಾಣ | - | 3375.00 | - |
| | ನಿರ್ವಹಣೆ | 15.00 | - | - |
| ಆಂದ್ರ ಪ್ರದೇಶ ಮಂತ್ರಾಲಯ ಕರ್ನಾಟಕ ರಾಜ್ಯ ಛತ್ರ | ನಿರ್ಮಾಣ | - | 400.00 | - |
| | ನಿರ್ವಹಣೆ | 154.00 | - | - |
| ಉತ್ತರ ಪ್ರದೇಶ, ವಾರಣಾಸಿ ಕರ್ನಾಟಕ ರಾಜ್ಯ ಛತ್ರ | ನಿರ್ಮಾಣ | - | - | - |
| | ನಿರ್ವಹಣೆ | 5.00 | - | - |
| ಮಹಾರಾಷ್ಟ್ರ, ತುಳಜಾಪುರ, ಕರ್ನಾಟಕ ರಾಜ್ಯ ಛತ್ರ | ನಿರ್ಮಾಣ | - | - | - |
| | ನಿರ್ವಹಣೆ | 10.00 | - | - |
| ಮಹಾರಾಷ್ಟ್ರ, ಗುಡ್ಡಾಪುರ, ಕರ್ನಾಟಕ ಭವನ | ನಿರ್ಮಾಣ | 200.00 | 500.00 | - |
| | ನಿರ್ವಹಣೆ | - | - | - |
| | ಒಟ್ಟು | 10834.00 | 4375.00 | 200.00 |

| | | |
|---|---|---|
| ಇ) | ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರಿ ವಸತಿ ಗೃಹಕ್ಕೆ ನೀಡಿದ ಅನುದಾನವೆಷ್ಟು: ಇವುಗಳಿಗೆ ಎಷ್ಟು ಖರ್ಚು ಮಾಡಲಾಗಿದೆ: ಒಟ್ಟು ಕೊಠಡಿಗಳ ಸಂಖ್ಯೆ ಎಷ್ಟು: ಪ್ರಸ್ತುತ ವಸತಿ ಗೃಹ ಯಾವ | ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರ/ ವಸತಿ ಗೃಹಗಳ ನಿರ್ಮಾಣ / ದುರಸ್ಥಿಗಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ಅನುದಾನ ಮಂಜೂರಾಗಿರುವುದಿಲ್ಲ. ಸದರಿ ಛತ್ರದಲ್ಲಿ ಎರಡು ವಸತಿ ಕಟ್ಟಡಗಳಿದ್ದು, ಇವುಗಳಲ್ಲಿ 18 ಕೊಠಡಿಗಳು ಇರುತ್ತವೆ.<br><br>ಪ್ರಸ್ತಾಪಿತ ಕಟ್ಟಡಗಳು ಹಳೆಯ ಕಟ್ಟಡಗಳಾಗಿದ್ದು, ಉನ್ನತೀಕರಿಸುವ ಅಗತ್ಯತೆ ಇದ್ದು, ರಾಜ್ಯ ಛತ್ರದಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td>ಸ್ಥಿತಿಯಲ್ಲಿದೆ: ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ದರ್ಜೆಯ ಸಂಪೂರ್ಣ ಮಾಹಿತಿ ನೀಡುವುದು:</td><td>ಕರ್ನಾಟಕ ರಾಜ್ಯ ಸರ್ಕಾರವು 2024-25ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ವಾರಣಾಸಿಯಲ್ಲಿ ರೂ.5-00 ಕೋಟಿಗಳ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಘೋಷಿಸಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಕಂಇ 46 ಮುಅಬಿ 2024 ದಿನಾಂಕ:21.03.2024ರಲ್ಲಿ, ಪ್ರಸಕ್ತ ಸಾಲಿನಲ್ಲಿ ವಾರಣಾಸಿಯಲ್ಲಿ ರೂ.5.00 ಕೋಟಿಗಳ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಯೋಜನೆಯನ್ನು ಅನುಷ್ಠಾನಗೊಳಿಸಲು ತಾತ್ವಿಕ ಅನುಮೋದನೆ ನೀಡಿರುತ್ತದೆ.<br><br>ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ 05 ವಿವರಗಳು ಈ ಕೆಳಕಂಡಂತಿದೆ.<br><br>
<table>
<tr><th>ಕ್ರ. ಸಂ.</th><th>ಹುದ್ದೆ ಮತ್ತು ಸಂಖ್ಯೆ</th><th>ದರ್ಜೆ /ವೃಂದ</th><th>ಷರಾ</th></tr>
<tr><td>1.</td><td>ವ್ಯವಸ್ಥಾಪಕರು-01</td><td>ಗ್ರೂಪ್ 'ಸಿ' (ಅಧೀಕ್ಷಕರ ವೃಂದ)</td><td>ಇಲಾಖಾ ಹುದ್ದೆ</td></tr>
<tr><td>2.</td><td>ಸಹಾಯಕರು-01</td><td>ಗ್ರೂಪ್ 'ಸಿ'</td><td>ಛತ್ರದ ವೇತನ ಶ್ರೇಣಿ ಖಾಯಂ ಹುದ್ದೆ</td></tr>
<tr><td>3.</td><td>ಅರ್ಚಕರು-01</td><td>ಗ್ರೂಪ್ 'ಸಿ'</td><td>ನಿಗಧಿತ ವೇತನ</td></tr>
<tr><td>4.</td><td>ಸ್ವೀಪರ್ -01</td><td>ಗ್ರೂಪ್ 'ಡಿ'</td><td>ಛತ್ರದ ವೇತನ ಶ್ರೇಣಿ ಖಾಯಂ ಹುದ್ದೆ</td></tr>
<tr><td>5.</td><td>ಸ್ಕ್ಯಾವೆಂಜರ್ -01</td><td>ಗ್ರೂಪ್ 'ಡಿ'</td><td>ಛತ್ರದ ವೇತನ ಶ್ರೇಣಿ ಖಾಯಂ ಹುದ್ದೆ</td></tr>
</table>
ಈ ಛತ್ರದಲ್ಲಿ ಪ್ರಸ್ತುತ ಗುತ್ತಿಗೆ ಆಧಾರದ ಮೇಲೆ ಯಾವುದೇ ನೌಕರರು ಕಾರ್ಯನಿರ್ವಹಿಸುತ್ತಿರುವುದಿಲ್ಲ.</td></tr>
<tr><td>ಈ)</td><td>ವಾರಣಾಸಿಯ ಕರ್ನಾಟಕ ರಾಜ್ಯ ಸರ್ಕಾರಿ ವಸತಿ ಗೃಹಕ್ಕೆ ಕಳೆದ ಮೂರು ವರ್ಷಗಳಿಂದ ಯಾವ ಯಾವ ಗಣ್ಯರು, ಜನಪ್ರತಿನಿಧಿಗಳು ಭೇಟಿ ನೀಡಿರುತ್ತಾರೆ? (ಸಂಪೂರ್ಣ ಮಾಹಿತಿ ನೀಡುವುದು)</td><td>ಕರ್ನಾಟಕ ರಾಜ್ಯ ಛತ್ರ ವಾರಣಾಸಿಗೆ ಲಭ್ಯವಿರುವ ಮಾಹಿತಿಯ ಮೇರೆಗೆ ಕಳೆದ 03 ವರ್ಷಗಳ ಅವಧಿಯಲ್ಲಿ ಈ ಕೆಳಕಂಡ ಗಣ್ಯರು ಮತ್ತು ಜನ ಪ್ರತಿನಿಧಿಗಳು ಭೇಟಿ ನೀಡಿರುತ್ತಾರೆ.<br><br>1. ಶ್ರೀಮತಿ ಶಶಿಕಲಾ ಜೊಲ್ಲೆ, ಮಾನ್ಯ ಮುಜರಾಯಿ ಸಚಿವರು.<br>2. ಶ್ರೀ ಅನ್ನಸಾಹೇಬ್ ಶಂಕರ್ ಜೊಲ್ಲೆ, ಮಾನ್ಯ ಸಂಸದರು.<br>3. ಶ್ರೀ ಶಿವಶೈಲಂ, ಮಾನ್ಯ ಸದಸ್ಯರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ.<br>ಶ್ರೀಮತಿ ಪ್ರಮೋದಿನಿ ದೇವಿ ಒಡೆಯರ್, ಮೈಸೂರು ಸಂಸ್ಥಾನದ ಮಹಾರಾಣಿಯವರು.</td></tr>
</table>

ಸಂಖ್ಯೆ: ಕಂಇ 89 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು